**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **24.07.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ವಾಟೀ ಸವಾಲುಃ 1ನೇ ಎದುರುದಾರರರ ಪರಃ ಶ್ರೀ ವಕೀಲರಿಂದ:**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅಪಘಾತದ ಪರಿಹಾರಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಪ್ರಮಾಣಪತ್ರವನ್ನು ಯಾರು ಬರೆಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ದಿನಾಂಕ 28.06.2020 ರಂದು ಅಪಘಾತವಾಗಿದೆ. ಮತೀತಾಳೇಶ್ವರ ದೇವಸ್ಥಾನಕ್ಕೆ ಹೋಗಿ ಬರುತ್ತಿರುವಾಗ ಅಪಘಾತವಾಗಿರುತ್ತದೆ. ಸದರಿ ಅವದಿಯಲ್ಲಿ ಲಾಕ್ ಡೌನ್ ಅಗಿತ್ತು ಎಂದರೆ ಸರಿ. ಆ ದಿನ ಭಾನುವಾರ ಅದ ಕಾರಣ ಸಂಪೂರ್ಣವಾಗಿ ಲಾಕ್ ಡೌನ್ ಅಗಿತ್ತು ಎಂದರೆ ಸರಿ. ಸದರಿ ಅವದಿಯಲ್ಲಿ ವಾಹನಗಳನ್ನು ರಸ್ತೆಗೆ ತರಬೇಕಾದರೆ ತಹಶೀಲ್ದಾರ್ ರವರ ಅನುಮತಿ ಬೇಕಾಗಿತ್ತು ಎಂದರೆ ಸರಿ. ನಾವು ತಹಶೀಲ್ದಾರ್ ರವರಿಂದ ಅನುಮತಿ ಪಡೆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನು ಆ ದಿನ ಸ್ಕೂಟರ್ ಚಾಲನೆ ಮಾಡುತ್ತಿದ್ದರು. ಸ್ಕೂಟರ್ ಚಾಲನೆ ಮಾಡಲು ನನ್ನ ಅಣ್ಣನಿಗೆ ಡಿ ಎಲ್ ಇತ್ತು. ಅದನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಟಿವಿಎಸ್ ಸ್ಕೂಟರನಲ್ಲಿ ಹೋಗುತ್ತಿರುವಾಗ ಅಪಘಾತವಾಗಿರುತ್ತದೆ. ಸದರಿ ಸ್ಕೂಟರ್ ನೊಂದಣಿ ಸಂಖ್ಯೆ ಗೊತ್ತಿರುವುದಿಲ್ಲ. ಯಮಾಹ ಬೈಕು ಬಂದು ಡಿಕ್ಕಿಪಡಿಸಿರುತ್ತದೆ ಅದರ ನಂಬರ್ ಗೊತ್ತಿರುವುದಿಲ್ಲ.

2) ಕನಕಪುರ ರಸ್ತೆಯು ನೇರವಾಗಿ ಇರುತ್ತದೆ ಎಂದರೆ ಸರಿ. ತಿರುವು ಪಡೆಯ ಬೇಕಾದರೆ ವಾಹನಗಳನ್ನು ನೋಡಿ ತಿರುವು ಪಡೆಯಬೇಕು ಎಂದರೆ ಸರಿ. ರಸ್ತೆ ನೇರವಾಗಿ ಇರುವುದರಿಂದ ವಾಹನಗಳು ಬರುವುದು ಕಾಣಿಸುತ್ತದೆ ಎಂದರೆ ಸರಿ. ಏಕ ಏಕಿ ನನ್ನ ಅಣ್ಣನು ಸ್ಕೂಟರನ್ನು ತಿರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ವಾಹನ ಚಾಲನೆ ಮಾಡಲು ತರಬೇತಿ ಇಲ್ಲದ ಕಾರಣ ಅವರೇ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಅಣ್ಣನಿಗೆ ಸ್ವಲ್ಪ ಗಾಯವಾಗಿತ್ತು. ಮಳವಳ್ಳಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಮಳವಳ್ಳಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಮಳವಳ್ಳಿ ಅಸ್ಪತ್ರೆಯಿಂದ ಸಿ.ಜಿ. ಅಸ್ಪತ್ರೆಗ ಹೋಗಿರುತ್ತೇನೆ. ಮಳವಳ್ಳಿ ಅಸ್ಪತ್ರೆಯವರು ಸಾಮಾನ್ಯವಾಗಿ ಜಿಲ್ಲಾ ಅಸ್ಪತ್ರೆಗೆ ಕಳುಹಿಸುತ್ತಾರೆ ಎಂದರೆ ನಾವು ಹೇಳಿದ ಕಾರಣ ಸದರಿ ಅಸ್ಪತ್ರೆಗೆ ಕಳುಹಿಸಿರುತ್ತಾರೆ. ನಾನು ಬಿ.ಪಿ.ಎಲ್ ಕಾರ್ಡನ್ನು ಹೊಂದಿರುತ್ತೇನೆ. ಆ ರೀತಿ ಪಡಿತರ ಚೀಟಿ ಇದ್ದರೇ ಸರ್ಕಾರಿ ಅಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಕೊಡುತ್ತಾರೆ ಎಂದರೆ ಅವರು ಸರಿಯಾಗಿ ನೋಡದ ಕಾರಣ ಖಾಸಗೀ ಅಸ್ಪತ್ರೆಗೆ ಹೋಗಿರುತ್ತೇವೆ. ಈಗ ಸ್ಪಂದನಾ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಅಪಘಾತವಾದ ದಿನದಂದೇ ಸಿ.ಜಿ. ಅಸ್ಪತ್ರೆಗೆ ಹೋಗಿರುತ್ತೇನೆ. ನನಗೆ ಶಸ್ತ್ರ ಚಿಕಿತ್ಸೆ ಅಗಿರುತ್ತದೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಗುಣಮುಖವಾಗಿರುತ್ತೇನೆ ಎಂದು ನಿಪಿ-11 ರಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಹೊರಗಡೆ ಔಷದಿಗಳನ್ನು ತೆಗೆದುಕೊಳ್ಳುವ ಬಗ್ಗೆ ರಶೀತಿಯನ್ನು ನೀಡಿದ್ದರು. ಜ್ಯೋತಿ ಅಸ್ಪತ್ರೆಯಲ್ಲಿ ಕೊಟ್ಟಿರುತ್ತಾರೆ ಎಂದು ಹೇಳುವ ರಶೀತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-12 ರ 7 ಮತ್ತು 8ನೇ ಬಿಲ್ಲುಗಳು 2010 ರ ಬಿಲ್ಲುಗಳು ಎಂದರೆ ಸರಿಯಲ್ಲ. ಈ ಪ್ರಕರಣಕೋಸ್ಕರ ಜ್ಯೋತಿ ಅಸ್ಪತ್ರೆಯವರ ಜೊತೆ ಸೇರಿ ಬಿಲ್ಲುಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.  ನಾನು 7 ದಿನಗಳ ಕಾಲ ಅಸ್ಪತ್ರೆಯಲ್ಲಿ ದಾಖಲಾಗಿದ್ದೆ. ಅಪಘಾತವಾದ ದಿನದಂದೇ ದೂರು ನೀಡಿರುತ್ತೇನೆ. ದೂರನ್ನು ನನ್ನ ಅಣ್ಣ ನೀಡಿದ್ದರು. ಸದರಿ ದಿನಾಂಕ 28.06.2020 ರ ದೂರನ್ನು  ಹಾಜರುಪಡಿಸಿರುತ್ತೇನೆ. ಅದರ ಅದಾರದ ಮೇಲೆ ಈ ಅರ್ಜಿ ಸಲ್ಲಿಸಿರುತ್ತೇನೆ. ಅಸ್ಪತ್ರೆಗೆ ಹಣವನ್ನು ನನ್ನ ಅಣ್ಣನು ಕೊಟ್ಟಿರುತ್ತೇನೆ. ನಾನು ಹಾಲನ್ನು ಹಾಕುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ಹೆಸರಿನಲ್ಲಿ ಜಮೀನು ಇರುವುದಿಲ್ಲ. ನಾನು ಡೈರಿಗೆ ಹಾಲು ಹಾಕುತ್ತಿದ್ದು ವ್ಯವಸಾಯ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆದುಕೊಳ್ಳಲು ನ್ಯಾಯಾಲಯಕ್ಕೆ ಈ ಸ್ದಿತಿಯಲ್ಲಿ ಬಂದಿರುತ್ತೇನೆ ಎಂದರೆ ಸರಿಯಲ್ಲ. ವೈದರು ಆ ರೀತಿಯ ಸಾದನಗಳನ್ನು ಬಳಸಬೇಕೆಂದು ನನಗೆ ಹೇಳಿಲ್ಲ ಎಂದರೆ ಸರಿಯಲ್ಲ  ಅಸ್ಪತ್ರೆಗೆ 1 ಲಕ್ಷದ 50 ಸಾವಿರ ರೂಪಾಯಿ ಖರ್ಚು ಅಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಸದರಿ ಬಿಲ್ಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಊಟ ಉಪಚಾರಕ್ಕೆ 50 ಸಾವಿರ  ಖರ್ಚು ಅಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಹೆಚ್ಚು ಸಮಯ ನಿಲ್ಲಲು ಅಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಮನೆಯಲ್ಲಿ ಇದ್ದಾಗ ನಡೆಯಲು ಯಾವುದೇ ಸಾದನವನ್ನು ಬಳಸುವುದಿಲ್ಲ ಎಂದರೆ ಸರಿಯಲ್ಲ.

3) ನಾನು ಹಾಜರುಪಡಿಸಿರುವ ನಿಪಿ-8 ರ ಅಂಶಗಳು ಸತ್ಯವಾಗಿರುತ್ತದೆ.  ಅದರಲ್ಲಿ ನಮೂದಾಗಿರುವ ನನ್ನ ಜನ್ಮ ದಿನಾಂಕ ಸರಿ ಇರುತ್ತದೆ.  ನನಗೆ ಅದರ ಪ್ರಕಾರ 76 ವರುಷ ವಯಸ್ಸು ಎಂದರೆ ಇರಬಹುದು. ನನಗೆ ಇದ್ದ ಮಂಡಿ ನೋವನ್ನು ಉಪಯೋಗಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ತೊಂದರೆ ಅಗದೇ ಇದ್ದರೂ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ, ನಾನು ಸಲ್ಲಿಸಿರುವ ನಿಪಿ-12 ಮತ್ತು ನಿಪಿ-13 ಕ್ಕೆ ವೈದ್ಯರ ಸಹಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ